(ಈ) ಆ ನೋಂದಣಿ ಫೀ ಮನ್ನಾ ಯಾವಾಗ ಮಾಡಲಾಗುವುದು?

ಶ್ರೀ ಧರ್ಮಸಿಂಗ್ (ಕಂದಾಯ ಹಾಗೂ ಸಮಾಜ ಕಲ್ಯಾಣ ಸಚಿವರು.) :

(ಅ) ರೈತರು ಪಡೆಯುವ ರೂ. 10,00-00 ದವರೆಗಿನ ಸಾಲಕ್ಕೆ ಬರೆದುಕೊಡುವ ದಸ್ತಾವೇಜಿನ ನೋಂದಣಿ ಶುಲ್ಕಕ್ಕೆ ಈಗ ವಿನಾಯ್ತಿ ಇದೆ. ರೂ. 10,000-00 ಮೇಲ್ಪಟ್ಟು ಪಡೆಯುವ ಸಾಲಕ್ಕೆ ಶೇಕಡಾ-50 ರಷ್ಟು ನೋಂದಣಿ ಫೀಸಹಾ ವಿನಾಯ್ತಿ ನೀಡಿದೆ.

ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ, 1959ರ ಕಲಂ-85 ಎ ಮತ್ತು ಕರ್ನಾಟಕ ಸಹಕಾರ ಸಂಘಗಳ ನಿಯಮ, 1965ರ ನಿಯಮ-49-ಬಿ ಅನ್ವಯ ದಸ್ತಾವೇಜುಗಳನ್ನು ನೋಂದಣಿಗೆ ಒತ್ತಾಯಿಸಿದ ಬ್ಯಾಂಕ್ ಮೂಲಕ ಉಪ-ನೋಂದಣಿ ಕಛೇರಿಗೆ ಫೈಲಿಂಗ್ ಮಾಡಲು ಕಳುಹಿಸಿಕೊಟ್ಟರೆ ಅಂಥ ಸಂದರ್ಭದಲ್ಲಿ ನೋಂದಣಿ ಫೀ ಕೊಡಬೇಕಾಗಿಲ್ಲ.

(ಆ) ಉದ್ಭವಿಸುವುದಿಲ್ಲ.

(ಇ) ಉದ್ಭವಿಸುವುದಿಲ್ಲ.

(ಈ) ಉದ್ಭವಿಸುವುದಿಲ್ಲ.

ಗ್ರಾಮ ಪಂಚಾಯತ್ ಚುನಾವಣೆಗಳಲ್ಲಿ ಅವಿರೋಧ ಆಯ್ಕೆಗಳಿಗೆ ಸಂಭಾವನೆ.

314 - ಶ್ರೀ ಪಿ. ಬಸವರಾಜ್ (ಬ್ರಹ್ಮವರ) : ಮಾನ್ಯ ಗ್ರಾಮೀಣ ಅಭಿವೃದ್ಧಿ ಮತ್ತು ಪಂ. ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ.

(ಅ) ಗ್ರಾಮ ಪಂಚಾಯಿತಿಯೊಂದರ ಎಲ್ಲಾ ಆಯ್ಕೆ ಅವಿರೋಧವಾಗಿ ನಡೆದಂತಹ ಪಂಚಾಯಿತಿಗಳಿಗೆ ವಿಶೇಷ ಪ್ರೋತ್ಸಾಹ ನೀಡಲು ಪುರಸ್ಕೃತ ಸಂಭಾವನೆ ಸಹಾಯ ಧನ ನೀಡುವ ಪರಿಪಾಠ ಸರಕಾರ ಇಟ್ಟಿರುತ್ತದೆಯೆ? ಇದ್ದರೆ ಎಷ್ಟು? ಮತ್ತು ಯಾವ ಪ್ರಮಾಣದಲ್ಲಿರುತ್ತದೆ? ವಿವರ ತಿಳಿಸುವುದು.

(ಆ) ಇಲ್ಲದಿದ್ದಲ್ಲಿ ಪಂಚಾಯತ್ ಸಾಮರಸ್ಯ ಬೆಳೆಸುವಲ್ಲಿ ಅನುಕೂಲವಾಗುವಂತಹ ಇಂತಹ ಒಗ್ಗಟ್ಟಿನ ಎಲ್ಲಾ ಸದಸ್ಯರ ಅವಿರೋಧ ಆಯ್ಕೆಯಾದ ಪಂಚಾಯತಿಗಳಿಗೆ ಪ್ರೋತ್ಸಾಹ ನೀಡುವ ಕುರಿತಂತೆ ಸಂಭಾವನೆ ಸಹಾಯಧನ ನೀಡುವ ಪರಿಪಾಠ ಇರಬೇಕಾದದ್ದು ಸೂಕ್ತವಲ್ಲವೆ? ಈ ಕುರಿತು ಸರ್ಕಾರ ಕ್ರಮ ಕೈಗೊಳ್ಳಬಹುದೆ?

ಶ್ರೀ ಎಂ.ವೈ. ಘೋರ್ಪಡೆ (ಗ್ರಾಮೀಣ ಅಭಿವೃದ್ಧಿ ಮತ್ತು ಪಂ.ರಾಜ್ ಸಚಿವರು.):

ಅ) ಇಲ್ಲ

ಆ) ಇಲ್ಲ

ಸಹಕಾರಿ ಸಂಸ್ಥೆಗಳಿಗೆ ಸರ್ಕಾರಿ ನಾಮಕರಣದ ಪದ್ಧತಿಯನ್ನು ರದ್ದುಪಡಿಸುವ ಬಗ್ಗೆ.

385 - ಶ್ರೀ ಗುರುಪಾದಪ್ಪ ನಾಗಮಾರಪಳ್ಳಿ (ಜೀರಾದ್) : ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

(ಅ) ಸಹಕಾರಿ ತಳಹದಿಯ ಮೇಲೆ ಪ್ರಾರಂಭವಾಗಿರುವ ಸಹಕಾರಿ ಸಂಸ್ಥೆಗಳಿಗೆ ಸರ್ಕಾರಿ ನಾಮಕರಣದ ಸದಸ್ಯರುಗಳನ್ನು ನೇಮಕ ಮಾಡುವ ಸಂಪ್ರದಾಯ ಎಂದಿನಿಂದ ನಡೆದು ಬಂದಿದೆ?

(ಆ) ಸಹಕಾರ ರಂಗದಲ್ಲಿ ಸರ್ಕಾರದ ಹಸ್ತಕ್ಷೇಪವನ್ನು ತಡೆಗಟ್ಟುವ ದೃಷ್ಟಿಯಿಂದ ಇದನ್ನು ಮುಂದೆ ಯಾವುದೇ ಸಹಕಾರಿ ಸಂಸ್ಥೆಗೆ ಸರ್ಕಾರಿ ನಾಮಕರಣದ